ರಾಜ್ಯದಲ್ಲಿ ಗ್ರಾನೈಟ್ ಶಿಲೆ ತೆಗೆಯುವುದನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ

47 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಗ್ರಾನೈಟ್ ಶಿಲೆ ತೆಗೆಯುವುದನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?*

ಆ) *ಹಾಗಿದ್ದಲ್ಲಿ ರಾಷ್ಟ್ರೀಕರಣಕ್ಕೆ ಕಾರಣವೇನು?*

ಇ) *ಈ ಬಗ್ಗೆ ಸರ್ಕಾರ ಕ್ರಿಯಾ ಯೋಜನೆ ತಯಾರಿಸಿದೆಯೇ? (ವಿವರ ಒದಗಿಸುವುದು)*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ.

ವಾರಾಹಿ ನೀರಾವರಿ ಯೋಜನೆ

75 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ರೈತರೇ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಸರಕಾರವು ಯೋಜಿಸಿದ ವರಾಹಿ ನೀರಾವರಿ ಯೋಜನೆಯ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?*

ಆ) *ಹತ್ತು ವರ್ಷಗಳ ಹಿಂದೆಯೇ ಆಂದಿನ ಮುಖ್ಯಮಂತ್ರಿಗಳು ಶಿಲಾನ್ಯಾಸ ಮಾಡಿದ್ದರೂ ಅದರ ಕಾಮಗಾರಿ ಆರಂಭಕ್ಕೆ ವಿಳಂಬವಾಗಲು ಕಾರಣಗಳೇನು?*

ಇ) *1992-93ನೇ ವರ್ಷದಲ್ಲಿ ಈ ಸಲುವಾಗಿ ಎಷ್ಟು ಹಣವನ್ನು ವ್ಯಯಿಸಲಾಗುವುದು ಮತ್ತು ಯಾವ ಉದ್ದೇಶದಿಂದ ವೆಚ್ಚ ಮಾಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವರಾಹಿ ನೀರಾವರಿ ಯೋಜನೆಯ ಕಾಮಗಾರಿಯನ್ನು 1992-93ರಲ್ಲಿ ಪ್ರಾರಂಭಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ಸದರಿ ಯೋಜನೆಗೆ ಅವಶ್ಯವಿರುವ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆಯಾಗದಿರುವುದರಿಂದ ಆ ಕಾಮಗಾರಿ ಆರಂಭಕ್ಕೆ ವಿಳಂಬವಾಗಿದೆ.

ಇ) 1992-93ನೇ ವರ್ಷದ ಆಯವ್ಯಯದಲ್ಲಿ ವರಾಹಿ ನೀರಾವರಿ ಯೋಜನೆಗಾಗಿ 40.00ಲಕ್ಷ ರೂ.ಗಳ ಅನುದಾನವಿದೆ. ಇದನ್ನು ಪ್ರಾಥಮಿಕ ಕೆಲಸಕ್ಕೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಕೋಲಾರದ ಜಿಲ್ಲೆಯಲ್ಲಿ ಗ್ರಾಮಾಂತರ ಪೋಲೀಸ್ ಠಾಣೆ

76 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೋಲಾರದಲ್ಲಿ ಗ್ರಾಮಾಂತರ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾಪವು ಬಹಳ ಕಾಲದಿಂದಲೂ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*